||JAI SRI GURUDEV||

# SRI ADICHUNCHANAGIRI FIRST GRADE COLLEGE

CHANNARAYAPATNA-573 116

Date : 30-01-2017

## IQAC

## Special Guest Lecture Programme

### A Brief Report:

On 29th Jan. 2017 under the auspices of Bar Association, Channarayapatna and our college conducted a special guest lecture programme on **Sexual Harassment on Women** and an interaction programme with our students in the HCS hall. A team of advocates were participated. The speakers' of the day were Mr Ravi Babu Chawan, Chief Civil Judge of Channarayapatna Munissif Court, Mr. S.S Parameshwar, President of Bar Association and the sub-inspector Mr. Giridhar. Prof. K.S. Devaraju, Principal, presided over the programme, in his speech the principal expressed his feeling about the harassment of women and the responsibility of an individual in the society.

In the interaction programme many students from Science faculty asked the questions about the security of girls in the society. Prof. E. Naganna, NSS, Co-ordinator and Prof. K. Chandran, IQAC, Co-ordinator were present in the programme. Dr. N. Shankaresh, HOD of Chemistry was compeered the programme

Principal
Sri Adichunchanagiri First Grade Collage
Channarayapatna-573 116

...ಬಾಲಕಿಯರ ಸರಕಾರಿ ಪ್ರೌಢಶಾಲೆ (ಪ್ರಧಾನ ...ತ್ತು ವಿಭಾ...) ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ...ಡೆಯಲಿದೆ.

ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಅಧ್ಯಕ್ಷ ಕೃಷ್ಣಮೂರ್ತಿ ಬಿ. ಸಂಗಣ್ಣನವರ್ ಜಾಥಾ ಉದ್ಘಾಟಿಸುವರು, ವಕೀಲರ ಸಂಘದ ಅಧ್ಯಕ್ಷ ಬಿ.ಟಿ.ಲಕ್ಷ್ಮೀ ನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ನ್ಯಾಯಾಧೀಶರಾದ ಡಿ.ವಿ. ಪಾಟೀಲ್, ಕೆ. ಪ್ರಕಾಶ್, ಎಚ್.ಸಿ. ಶ್ಯಾಮಪ್ರಸಾದ್, ಸಂತೋಷ ಗಜಾನನ ಭಟ್, ಕಲ್ಪನಾ ಕುಲಕರ್ಣಿ ಹಾಗೂ ಇತರರು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಹೆಣ್ಮಕ್ಕಳಿಗೆ ಮುಜುಗರ ಮಾಡುವುದೂ ...

■ **ವಿಕ ಸುದ್ದಿಲೋಕ** ಚನ್ನರಾಯಪಟ್ಟಣ

ಹೆಣ್ಣು ಮಕ್ಕಳಿಗೆ ಮುಜುಗರ ಉಂಟಾಗುವಂತೆ ನಡೆದುಕೊಳ್ಳುವುದು ಕೂಡ ಲೈಂಗಿಕ ಅಪರಾಧವಾಗುತ್ತದೆ ಎಂದು ಸಹಾಯಕ ಸರಕಾರಿ ಅಭಿಯೋಜಕ ಎಂ.ಮೃತ್ಯುಂಜಯ ಹೇಳಿದರು.

ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಮತ್ತು ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜು ಆಶ್ರಯದಲ್ಲಿ ಎಚ್‌ಎಎಸ್ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ ಕುರಿತ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ದೌರ್ಜನ್ಯಕ್ಕೊಳಗಾದವರು ದೂರು ದಾಖಲಿಸದಿರುವುದರಿಂದ ಕಾಮುಕರು ಕೃತ್ಯವನ್ನು ಮುಂದುವರಿಸಲು ಸಹಕಾರಿಯಾಗುವುದರಿಂದ ಪೊಲೀಸರಿಗೆ ದೂರು ನೀಡುವುದು ಸೂಕ್ತವೆಂದ ಅವರು ದೌರ್ಜನ್ಯಕ್ಕೊಳಗಾದವರ ಬಗೆಗಿನ ಯಾವ ಮಾಹಿತಿಯನ್ನೂ ಬಹಿರಂಗಗೊಳಿಸುವಂತಿಲ್ಲವೆಂಬ ನಿಯಮವಿದೆ. ಗಂಭೀರ ಪ್ರಕರಣದ ವಿಚಾರಣೆ ವೇಳೆ ನ್ಯಾಯಾಲಯದಲ್ಲೂ ಅಗತ್ಯದಷ್ಟು ಮಂದಿ ಮಾತ್ರ ಇರಬಹುದಾಗಿದೆ. ಅಪರಾಧಗಳು ಮರುಕಳಿಸಲು ಪೂರಕವಾದ ವಾತಾವರಣ ಸೃಷ್ಟಿಯಾಗಬಾರದು ಎಂದರು.

ವಿಕ ಚಿತ್ರಲೋಕ



ಚನ್ನರಾಯಪಟ್ಟಣ ತಾಲೂಕು ಕಾನೂನು ಸೇವಾಸಮಿತಿ ಆಶ್ರಯದಲ್ಲಿ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ನ್ಯಾಯಾಧೀಶರಾದ ರವಿಬಾಬುಚವಾಣ್ ಮಾತನಾಡಿದರು.

ನ್ಯಾಯಾಲಯದಲ್ಲೂ ಸಾಕ್ಷಿದಾರರ ಮೇಲೆ ಯಾವುದೇ ಶ್ರಮವಹಿಸದ ಕಾರಣ ನಿರ್ಭೀತಿಯಿಂದ ನಡೆದುಕೊಳ್ಳಬೇಕು. ಕಾನೂನುಗಳನ್ನು ಜಾರಿಗೆ ತರಲು ನಾಗರೀಕರ ಸಹಕಾರ ಮುಖ್ಯ. ಯಾವುದೇ ಒತ್ತಡ, ಆಮಿಷಗಳಿಗೆ ಒಳಗಾಗದೆ ಸಾಕ್ಷಿ ಹೇಳಬೇಕು. ಸಹಮತವಿದ್ದರೂ 18 ವರ್ಷದೊಳಗಿನ ಹೆಣ್ಣುಮಕ್ಕಳ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯವನ್ನು ಅತ್ಯಾಚಾರವೆಂದು ನ್ಯಾಯಾಲಯ ಪರಿಗಣಿಸಲಿದೆ ಎಂದ ಅವರು ಇಂತಹ ಅಪರಾಧಗಳ ವಿವಿಧ ರೂಪಗಳ ಪರಿಚಯ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಾಲೂಕು ಕಾನೂನು ಸೇವೆಗಳ ಸಮಿತಿ ಕಾರ್ಯದರ್ಶಿ ರವಿಬಾಬುಚವಾಣ್ ಮಹಿಳಾ ಸಹಾಯವಾಣಿ ಕೇಂದ್ರಗಳ ಮೂಲಕ ನೊಂದ ಮಹಿಳೆಯರು ನೇರವಾಗಿ ನೆರವು ಪಡೆಯಬಹುದಾಗಿದ್ದು ಇದರೊಟ್ಟಿಗೆ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮಹಿಳಾ ಆಯೋಗಗಳೂ ಕೈಜೋಡಿಸಲಿವೆ. ನೊಂದವರ ನೆರವಿಗೆ ಹಲವಾರು ಮಾರ್ಗಗಳಿದ್ದು ಅವುಗಳ ಪ್ರಯೋಜನ ಪಡೆದುಕೊಳ್ಳಬೇಕು. ಪ್ರಕೃತಿಯ ಅಮೂಲ್ಯ ಕೊಡುಗೆಯಾಗಿರುವ ಹೆಣ್ಣು ಎಲ್ಲರ ಬಾಳಲ್ಲಿ ಕಣ್ಣಾಗಬೇಕಿದ್ದು ಆಕೆಯ ಭಾವನೆಗಳನ್ನು ಗೌರವಿಸೋಣವೆಂದರು.

ಅಧ್ಯಕ್ಷತೆವಹಿಸಿದ್ದ ಪ್ರಾಚಾರ್ಯ. ಪ್ರೊ.ಕೆ. ಎಸ್.ದೇವರಾಜು ಮಾತನಾಡಿ ಕಾನೂನಿನ ಅರಿವಿದ್ದರೆ ಅದರ ನೆರವು ಪಡೆಯಬಹುದು. ಬಿಗಿಯಾದ ಕಾನೂನಿನ ನಡುವೆಯೂ ದೌರ್ಜನ್ಯಗಳು ಹೆಚ್ಚುತ್ತಿರುವುದು ವಿಷಾದಕರ ಸಂಗತಿಯಾಗಿದೆ. ಸಮಾಜ ಜಾಗೃತಿ ಹೊಂದಿದಾಗ ಮಾತ್ರ ಸಾಮಾಜಿಕ ಅನಿಷ್ಟಗಳನ್ನು ದೂರಮಾಡಬಹುದು. ಆಗ ಮಾತ್ರ ಅಪರಾಧಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತದೆ ಎಂದರು. ವಕೀಲರ ಸಂಘದ ಅಧ್ಯಕ್ಷ ಎಸ್. ಎಸ್.ಪರಮೇಶ್ವರ್, ಅಪರಾಧ ವಿಭಾಗದ ಸಬ್‌ಇನ್‌ಸ್ಪೆಕ್ಟರ್ ಬಿ.ಗಿರಿಧರ್, ರಾಷ್ಟ್ರೀಯ ಸೇವಾಯೋಜನೆ ಅಧಿಕಾರಿ ನಾಗಣ್ಣ, ಕೆ.ಚಂದ್ರನ್ ಇದ್ದರು.

**ರಕ್ಷಕರೇ ಭಕ್ಷಕರಾದಾಗ ಏನು ಮಾಡಬೇಕು?**

ನ್ಯಾಯಾಲಯದಲ್ಲೇ ಭ್ರಷ್ಟಾಚಾರ ಸುಳಿದರೆ ನ್ಯಾಯವೆನ್ನುವುದು ಉಳ್ಳವರ ಪಾಲಾಗುತ್ತದಲ್ಲ, ಲೈಂಗಿಕ ಕಿರುಕುಳ ನೀಡಿದವನ ಮರ್ಮಾಂಗವನ್ನೇ

ತೆಗೆಯ... ಹೀಗೆ ... ವಿದ್ಯಾರ್ಥಿ... ವೇದಿಕೆಯ... ನೀಡುವ ... ಕಾರ್ಯಕ್ರಮ... ಸಾಂಪ್ರ... ನಂತರ ... ಪ್ರಶ್ನೆಗಳ... ಅಮೃತ, ... ಇತರ ವಿ... ದೂರು ... ಹೋದಾ... ಮಾಡುವ... ಸಮರ್ಪ... ಮತ್ತೊಮ್ಮೆ... ನ್ಯಾಯ ... ನ್ಯಾಯಾ... ನ್ಯಾಯಾ... ಹೆಚ್ಚಿನ ... ಸಾಕ್ಷಿದಾ... ಪ್ರಶ್ನೆಗೆ ... ಹೆಚ್ಚಾಗು... ಬಂತು.

Principal
Sri Adichunchanagiri First Grade Collage
Channarayapatna-573 116

ಆಲೂರು ತಾಲ್ಲೂಕು ಸಹಾಯಕ ರೈತರಿಗೆ ತಲುಪಿಸಿ ಎಂದು ಹೇಳಿದರು. ಸಹಾಯಕರು ಭಾಗವಹಿಸಿದ್ದರು.



ಅವರು ಗ್ರಾಮಸ್ಥರ ಜತೆ ಚರ್ಚಿಸಿದರು



...ಬೆಳಗಿಸಿ ಹುತಾತ್ಮ ಯೋಧ ಸಂದೀಪ್

...ರಲು ...ರ್ಕ ...ವೇ ...ದಿಗೆ ...ದ್ದಾರೆ.

ಎಂದರು. ಯೋಧನ ಸಾವಿನ ಸುದ್ದಿ ತಿಳಿದ ನಂತರವೂ ಜಿಲ್ಲಾಧಿಕಾರಿ ಹಾಗೂ ಉಸ್ತುವಾರಿ ಸಚಿವರು ಭೇಟಿ ನೀಡದಿರುವುದಕ್ಕೆ ಅವರು ಅಸಮಾಧಾನ ವ್ಯಕ್ತಪಡಿಸಿದರು.

# ...ಉದ್ಘಾಟನೆ

# ಮಹಿಳೆಯರನ್ನು ಗೌರವಿಸಿ: ಸಲಹೆ

29/1/2017

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ: ಕಾನೂನು ಬದ್ಧ ಹಕ್ಕುಗಳ ಮೂಲಕ ಮಹಿಳೆಯರು ಪ್ರವರ್ಧಮಾನಕ್ಕೆ ಬರಬೇಕು ಎಂದು ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶ ರವಿಬಾಬು ಚವ್ಹಾಣ್ ಹೇಳಿದರು.

ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಪಟ್ಟಣದಲ್ಲಿ ಶನಿವಾರ ನಡೆದ 'ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕುರಿತು ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.

ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ನಿವಾರಿಸಲು ಕಾನೂನು ರೂಪಿಸಲಾಗಿದೆ. ಮಹಿಳಾ ಆಯೋಗ ಇದೆ. ಪ್ರತಿ ಜಿಲ್ಲೆಯಲ್ಲಿ ಸಹಾಯವಾಣಿ ರಚಿಸಲಾಗಿದೆ. ನೊಂದ ಮಹಿಳೆಯರಿಗೆ ಕಾನೂನು ಅರಿವು, ನೆರವು ಒದಗಿಸಲಾಗುತ್ತಿದೆ ಎಂದರು.



ಚನ್ನರಾಯಪಟ್ಟಣದಲ್ಲಿ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ನ್ಯಾಯಾಧೀಶ ರವಿಬಾಬು ಚವ್ಹಾಣ್ ಉದ್ಘಾಟಿಸಿದರು

ಮಹಿಳೆಯರನ್ನು ಗೌರವಿಸಬೇಕು. ಸಮಾಜದ ಪ್ರಗತಿಯಲ್ಲಿ ಆಕೆಯ ಪಾತ್ರ ಮುಖ್ಯವಾದುದು ಎಂದು ಅವರು ಹೇಳಿದರು.

ಸಹಾಯಕ ಸರ್ಕಾರಿ ಅಭಿಯೋಜಕ ಎಂ.ಮೃತ್ಯುಂಜಯ ಮಾತನಾಡಿ, ಮಹಿಳೆಗೆ ಮುಜುಗರವನ್ನುಂಟು ಮಾಡುವ ಸನ್ನಿವೇಶ ಸೃಷ್ಟಿಸಬಾರದು ಎಂದು ಹೇಳಿದರು. ಕಾಲೇಜು ಪ್ರಾಂಶುಪಾಲ ಕೆ.ಎಸ್.ದೇವರಾಜು ಮಾತನಾಡಿ, ಮಹಿಳೆಯರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್.ಪರಮೇಶ್ವರ್, ಸಬ್ ಇನ್‌ಸ್ಪೆಕ್ಟರ್ ಬಿ.ಗಿರಿಧರ್ ಮಾತನಾಡಿದರು. ಕಾಲೇಜು ಸಹಪ್ರಾಧ್ಯಾಪಕರಾದ ಕೆ.ಚಂದ್ರನ್, ಡಾ.ಎನ್.ಶಂಕರೇಶ್, ಇ.ನಾಗಣ್ಣ ಇದ್ದರು.

## ಹುತಾತ್ಮರ ಸ್ಮರಣೆ: ಮೌನಾಚರಣೆ ನಾಳೆ

ಹಾಸನ: ಭಾರತ ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದ ಮಹನೀಯರ ಸ್ಮರಣಾರ್ಥ ಜ. 30ರಂದು ಹುತಾತ್ಮರ ದಿನ ಆಚರಿಸಲಾಗುತ್ತಿದೆ. ಜಿಲ್ಲಾಮಟ್ಟದ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿ ಸೋಮವಾರ ಬೆಳಿಗ್ಗೆ 11ರಿಂದ ಎರಡು ನಿಮಿಷ ಮೌನ ಆಚರಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಆದೇಶ ಹೊರಡಿಸಿದ್ದಾರೆ.

## ಯೋಧ ಸಂದೀಪ್‌ಗೆ ಶ್ರದ್ಧಾಂಜಲಿ

ಹಾಸನ: ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಭವಿಸಿದ ಹಿಮಪಾತದಲ್ಲಿ ವೀರ ಮರಣವಪ್ಪಿದ ತಾಲ್ಲೂಕಿನ ಡಿ.ಪಿ. ಸಂದೀಪ್ ಕುಮಾರ್ ಅವರಿಗೆ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮ ಪ್ರಯುಕ್ತ ನಗರದ ಕುವೆಂಪು ಪ್ರಥಮ ದರ್ಜೆ ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಶನಿವಾರ ಏರ್ಪಡಿಸಲಾಗಿತ್ತು.

ತಾಲ್ಲೂಕು ರೆಡ್ ಕ್ರಾಸ್ ಸಂಸ್ಥೆ ಅಧ್ಯಕ್ಷ ...ಷೋತ್ತಮ್ ಮಾತನಾಡಿ, ರಕ್ತಕ್ಕೆ ಪರ್ಯಾಯ ವಸ್ತು ಮತ್ತೊಂದಿಲ್ಲ. ಯುವ ಜನತೆ ರಕ್ತದಾನದ ಬಗ್ಗೆ ಇರುವ ತಪ್ಪು ತಿಳವಳಿಕೆ, ಅಪನಂಬಿಕೆಗಳಿಂದ ಹೊರಬರಬೇಕೆಂದು ವಿನಂತಿಸಿದರು.

ಪ್ರೊ.ಕೃಷ್ಣಪ್ಪ ಮಾತನಾಡಿ, ವಿಶ್ವದಾದ್ಯಂತ ಇರುವ ಮಾನವೀಯ ಸಂಸ್ಥೆಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆ ಪ್ರಮುಖವಾಗಿದೆ. ಸಂಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುವುದೇ ...

Principal
Sri Adichunchanagiri First Grade Collage
Channarayapatna-573 116

ಕೊಂಡಿರುವ

30/1/2017

# ಚನ್ನರಾಯಪಟ್ಟಣದಲ್ಲಿ ಕಾನೂನು ಅರಿವು

## ಆದಿಚುಂಚನಗಿರಿ ಕಾಲೇಜಿನ ಎಚ್‌ಸಿಎಸ್ ಸಭಾಂಗಣದಲ್ಲಿ ಆಯೋಜನೆ

■ ವಿಜಯವಾಣಿ ಸುದ್ದಿಜಾಲ ಚನ್ನರಾಯಪಟ್ಟಣ

ಮಹಿಳೆಯರ ಭಾವನೆಯನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ಗೌರವಿಸುವ ಮೂಲಕ ಒಳ್ಳೆಯ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ರವಿಬಾಬು ಚವಾಣ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಕಾಲೇಜಿನ ಎಚ್‌ಸಿಎಸ್ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿವಿಧ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆ ಬಗ್ಗೆ ಕೀಳರಿಮೆ ಸಲ್ಲದು. ಉದ್ಯೋಗ ಸ್ಥಳದಲ್ಲಿ ಹೆಚ್ಚಿನ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನಡೆಯುತ್ತಿವೆ. ಇದು ನಿಲ್ಲಬೇಕು, ಪುರುಷನಿಗೆ ಸಮನಾಗಿ ದುಡಿಯುವ ಮಹಿಳೆಯರನ್ನು ಗೌರವದಿಂದ ಕಾಣುವುದನ್ನು ಬೆಳೆಸಿ ಕೊಳ್ಳಬೇಕು ಎಂದರು.

ಸಹಾಯಕ ಸರ್ಕಾರಿ ಅಭಿಯೋಜಕ ಮೃತ್ಯುಂಜಯ ಮಾತನಾಡಿದರು. ಆದಿಚುಂಚನಗಿರಿ ಕಾಲೇಜಿನ ಪ್ರಾಂಶುಪಾಲ ಕೆ.ಎಸ್.ದೇವರಾಜು, ಎನ್‌ಎಸ್‌ಎಸ್ ಅಧಿಕಾರಿ ನಾಗಣ್ಣ, ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್ .ಪರಮೇಶ್ವರ್, ಪಿಎಸ್‌ಐ ಬಿ.ಗಿರಿಧರ್ ಇತರರಿದ್ದರು.

## ರಸ್ತೆ ಸುರಕ್ಷತಾ ಸಪ್ತಾಹ ಜಾಥಾ

■ ವಿಜಯವಾಣಿ ಸುದ್ದಿಜಾಲ ಹಿರೀಸಾವೆ

ಆರಕ್ಷಕ ಸಿಬ್ಬಂದಿ ಹಾಗೂ ಸರ್ಕಾರಿ ಬಾಲಕರ ಪ್ರೌಢಶಾಲೆ ವಿದ್ಯಾರ್ಥಿಗಳ ಆಶ್ರಯದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಪ್ರಯುಕ್ತ ಅರಿವು ಜಾಥಾ ನಡೆಸಲಾಯಿತು.

ವೃತ್ತ ನಿರೀಕ್ಷಕ ವಸಂತ್‌ಕುಮಾರ್ ಮಾತನಾಡಿ, ಪ್ರತಿಯೊಬ್ಬ ಮನುಷ್ಯನ ಜೀವ ಅತ್ಯಮೂಲ್ಯ. ಆದ್ದರಿಂದ ಪ್ರತಿ ಬೈಕ್ ಸವಾರರು ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪಿಎಸ್‌ಐ ಜಗದೀಶ್, ವೆಂಕೋಬರಾವ್, ಹೆಡ್ ಕಾನ್‌ಸ್ಟೇಬಲ್ ಸುಬ್ರಹ್ಮಣ್ಯ, ಸಿಬ್ಬಂದಿಯಾದ ಲೋಕೇಶಾಚಾರ್, ರವಿ ಕುಮಾರ್ ನಾಯಕ್ ಇತರರು ಹಾಜರಿದ್ದರು.

ಚನ್ನರಾಯ ಪಟ್ಟಣ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ನ್ಯಾ.ರವಿಬಾಬು ಚವಾಣ್ ಉದ್ಘಾಟಿಸಿದರು.



# ಮಹಿಳೆಯರನ್ನು ಗೌರವಿಸಿ: ಸಲಹೆ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ: ಕಾನೂನು ಬದ್ಧ ಹಕ್ಕುಗಳ ಮೂಲಕ ಮಹಿಳೆಯರು ಪ್ರವರ್ಧಮಾನಕ್ಕೆ ಬರಬೇಕು ಎಂದು ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶ ರವಿಬಾಬು ಚವ್ಹಾಣ್ ಹೇಳಿದರು.

ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಪಟ್ಟಣದಲ್ಲಿ ಶನಿವಾರ ನಡೆದ 'ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕುರಿತು ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.



ಚನ್ನರಾಯಪಟ್ಟಣದಲ್ಲಿ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ನ್ಯಾಯಾಧೀಶ ರವಿಬಾಬು ಚವ್ಹಾಣ್ ಉದ್ಘಾಟಿಸಿದರು

ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ನಿವಾರಿಸಲು ಕಾನೂನು ರೂಪಿಸಲಾಗಿದೆ. ಮಹಿಳಾ ಆಯೋಗ ಇದೆ. ಪ್ರತಿ ಜಿಲ್ಲೆಯಲ್ಲಿ ಸಹಾಯವಾಣಿ ರಚಿಸಲಾಗಿದೆ. ನೊಂದ ಮಹಿಳೆಯರಿಗೆ ಕಾನೂನು ಅರಿವು, ನೆರವು ಒದಗಿಸಲಾಗುತ್ತಿದೆ ಎಂದರು.

ಮಹಿಳೆಯರನ್ನು ಗೌರವಿಸಬೇಕು. ಸಮಾಜದ ಪ್ರಗತಿಯಲ್ಲಿ ಆಕೆಯ ಪಾತ್ರ ಮುಖ್ಯವಾದುದು ಎಂದು ಅವರು ಹೇಳಿದರು.

ಸಹಾಯಕ ಸರ್ಕಾರಿ ಅಭಿಯೋಜಕ ಎಂ.ಮೃತ್ಯುಂಜಯ ಮಾತನಾಡಿ, ಮಹಿಳೆಗೆ ಮುಜುಗರವನ್ನುಂಟು ಮಾಡುವ ಸನ್ನಿವೇಶ ಸೃಷ್ಟಿಸಬಾರದು ಎಂದು ಹೇಳಿದರು. ಕಾಲೇಜು ಪ್ರಾಂಶುಪಾಲ ಕೆ.ಎಸ್.ದೇವರಾಜು ಮಾತನಾಡಿ, ಮಹಿಳೆಯರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್.ಪರಮೇಶ್ವರ್, ಸಬ್ ಇನ್‌ಸ್ಪೆಕ್ಟರ್ ಬಿ.ಗಿರಿಧರ್ ಮಾತನಾಡಿದರು. ಕಾಲೇಜು ಸಹಪ್ರಾಧ್ಯಾಪಕರಾದ ಕೆ.ಚಂದ್ರನ್, ಡಾ.ಎನ್.ಶಂಕರೇಶ್, ಇ.ನಾಗಣ್ಣ ಇದ್ದರು.

Principal
Sri Adichunchanagiri First Grade Collage
Channarayapatna-573 116

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Date: 28-01-2016

## IQAC

## AWARENESS ON USING APPS & HELMETS

**A BRIEF REPORT:**

On 27th January 2016 an awareness programme on using Apps & Helmets was arranged under the auspices of IQAC for the benefit of the students. It was arranged in association with the Department of Police Channarayapatna.

Mr. H.M. Shylendra, Circle Inspector of Police addressed the students and enlightened about the benefits of using the Apps & Helmets. Regarding the newly introduced App by the Police Department by name Helpline App, he gave all the useful tips especially for the girls at the time of distress. He told that this Helpline App is particularly introduced for the working ladies and girls who are studying in the colleges. They can make use of this Helpline whenever they are in helpless condition. Then he told that using the Helmets will be made mandatory from 1st of February. He also spoke about the benefits of using the life saving helmets.

Prof. K.S. Devaraju, the Principal Presided over the function. Prof. K. Chandran, Co-ordinator, IQAC and Prof. S.B. Shivakumar, HOD of Sociology were present on the occasion.

Chunchanagiri First Grade College 573 116. No. Dt. Channarayapatna

# ...ರ್ತವ್ಯ

ಸಿ.ಎಸ್. ಹೇಮಲತಾ, ಲತಾ, ಮಂಜುಳಾ, ಮಂಜೇಗೌಡ ಕಾರ್ಯಕ್ರಮದಲ್ಲಿ ಇದ್ದರು.

**ಸುಜಲ ವಿದ್ಯಾ ಸಂಸ್ಥೆ:** 'ಭಾರತ ಸಂವಿಧಾನ ರಚನೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪಾತ್ರ ಪ್ರಮುಖವಾದುದು' ಎಂದು ಸುಜಲ ವಿದ್ಯಾ ಸಂಸ್ಥೆ ಅಧ್ಯಕ್ಷ ಡಿ. ಸುಬ್ಬೇಗೌಡ ಹೇಳಿದರು.

ಸುಜಲ ಪ್ರಥಮದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾವಿರಾರು ವರ್ಷಗಳ ವಿದೇಶಿ ದಾಳಿಗೆ ನಲುಗಿದ ಭಾರತ ಇಂದಿಗೂ ತನ್ನ ಗಾಂಭೀರ್ಯತೆ ಕಾಯ್ದುಕೊಂಡಿದೆ. ಭಾರತದ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ' ಎಂದರು.

ಪ್ರಾಂಶುಪಾಲ ಕುಮಾರ್, ಕಾರ್ಯದರ್ಶಿ ಲೋಕೇಶ್ ಎಸ್, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಝುಲ್ಫಿ ಹಾಸನ್ ಮಾತನಾಡಿದರು.

ಚಂದ್ರಶೇಖರ್ ಎಚ್.ಎಸ್. ಚೇತನ್, ಮುಜಮ್ಮಿಲ್ ಕಾರ್ಯಕ್ರಮದಲ್ಲಿ ಇದ್ದರು.



...ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳೊಂದಿಗೆ ...ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಗೈಡ್...

# ...ಳಿಗೆ ಸಲಹೆ

## ...ಕ್ಷಾ ಕಾರ್ಯಕ್ರಮ

...ಸಮಿತಿಯ ಯುವ ಪ್ರಭಾರಿ ಸುರೇಶ್ ಪ್ರಜಾಪತಿ, ರಂಗನಾಥ ಪ್ರಸಾದ್ ಹಾಗೂ ಕ.ವಿ. ನಾಗರಾಜ್ ಇದ್ದರು.

## ಆಯುರ್ವೇದ ಜೀವನದ ಅವಿಭಾಜ್ಯ ಅಂಗ

ಹಾಸನ: ಭಾರತೀಯ ವೈದ್ಯ ಪದ್ಧತಿಗಳಾದ ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ ಮತ್ತು ಯುನಾನಿ ಪದ್ಧತಿ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗ

## ಸುದ್ದಿ 2 ನಿಮಿಷ

# ಮಹಿಳೆಯರ ಸಮಸ್ಯೆಗೆ 'ಆ್ಯಪ್' ಸ್ಪಂದನೆ

ಚನ್ನರಾಯಪಟ್ಟಣ: ಹಾಸನ ಜಿಲ್ಲೆಯಲ್ಲಿ ವಿನೂತನವಾಗಿ ಜಾರಿಗೆ ತಂದಿರುವ 'ಸಹಾಯವಾಣಿ ಆ್ಯಪ್' ಮೂಲಕ ಮಹಿಳೆಯರ ಕುಂದು ಕೊರತೆ ನಿವಾರಿಸಲಾಗುವುದು ಎಂದು ಇನ್ಸ್‌ಪೆಕ್ಟರ್ ಎಚ್.ಎಂ. ಶೈಲೇಂದ್ರ ಹೇಳಿದರು.

ಬುಧವಾರ ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆಕಾಲೇಜಿನಲ್ಲಿ ಪೊಲೀಸ್ ಇಲಾಖೆವತಿಯಿಂದ ಏರ್ಪಡಿಸಿದ್ದ ಸಹಾಯವಾಣಿ ಆ್ಯಪ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಪಾಯದಲ್ಲಿರುವ ಮಹಿಳೆಯರು ಮೊಬೈಲ್‌ನಲ್ಲಿ ಹೆಲ್ಪ್ ಬಟನ್ ಒತ್ತಿಕರೆ ಮಾಡಿದರೆ ಅಂಥವರ ನೆರವಿಗೆ ಪೊಲೀಸ್ ಇಲಾಖೆ ಧಾವಿಸಲಿದೆ. ಮಹಿಳೆಯರು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದರು.

ಫೆ. 1ರಿಂದ ಜಿಲ್ಲೆಯಾದ್ಯಂತ ಮೋಟರ್ ಬೈಕ್ ಸವಾರರಿಗೆ ಹೆಲ್ಮೆಟ್ ಕಡ್ಡಾಯಗೊಳಿಸಲಾಗುವುದು ಎಂದರು. ಪ್ರಾಂಶುಪಾಲ ಕೆ.ಎಸ್. ದೇವರಾಜು, ಸಹಪ್ರಾಧ್ಯಾಪಕರಾದ ಕೆ. ಚಂದ್ರನ್, ಎಸ್.ಬಿ. ಶಿವಕುಮಾರ್ ಇದ್ದರು.



ಚನ್ನರಾಯಪಟ್ಟಣದಲ್ಲಿ ಬುಧವಾರ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನಲ್ಲಿ ಪೊಲೀಸ್ ಇಲಾಖೆ ವತಿಯಿಂದ ಏರ್ಪಡಿಸಿದ್ದ 'ಸಹಾಯವಾಣಿ ಆ್ಯಪ್' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

# ವಿಶ್ವಮಾನವ ಸಂದೇಶ ಪಾಲಿಸಿ

ಹಾಸನ: ನಗರದ ಮಹಾರಾಜಾ ಪಾರ್ಕಿನಲ್ಲಿರುವ ಓಂ ಯೋಗ ಶಾಲೆಯಲ್ಲಿ ಈಚೆಗೆ ರಾಷ್ಟ್ರಕವಿ ಕುವೆಂಪು ಮತ್ತು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಯೋಗ ಶಾಲೆ ಅಧ್ಯಕ್ಷ ಹಾಗೂ ಸಾಹಿತಿ ಜ.ಹೊ. ನಾರಾಯಣ ಸ್ವಾಮಿ ಮಾತನಾಡಿ, 'ಭಾರತದ ಘನತೆಯನ್ನು ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದಲ್ಲಿ ಎತ್ತಿಹಿಡಿದ ರೀತಿ ಅಮೋಘ. ಅದೇ ರೀತಿ ಕುವೆಂಪು ಕೂಡ ಸಾಹಿತ್ಯದ ಮೂಲಕ ಉನ್ನತ ಸ್ಥಾನಕ್ಕೇರಿದ್ದಾರೆ' ಎಂದರು.

ಸಾಹಿತಿ ಪ್ರೊ. ಸೈಯದ್ ಷಹಾಬುದ್ದೀನ್ ಮಾತನಾಡಿ, 'ಕುವೆಂಪು ಅವರ ವಿಶ್ವಮಾನವ ಸಂದೇಶ ವೈಚಾರಿಕ ಚಿಂತನೆಗಳು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವಂತಹವು. ಅದಕ್ಕಾಗಿ ಅವರ ಸಾಹಿತ್ಯವನ್ನು ಅಭ್ಯಾಸ ಮಾಡಬೇಕು' ಎಂದರು.

ಲೇಖಕ ಗೊರೂರು ಶಿವೇಶ್ ಮಾತನಾಡಿ, 'ಸ್ವಾಮಿ ವಿವೇಕಾನಂದರು ಯೋಗದೊಂದಿಗೆ ರಾಜಯೋಗವನ್ನು ಸಮ್ಮಿಲನಗೊಳಿಸಿ ವಿದೇಶದಲ್ಲಿ ಜನಪ್ರಿಯರಾದರು. ಕುವೆಂಪು ನೇಗಿಲ ಯೋಗಿಯ ಮಹತ್ವವನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಟ್ಟರು' ಎಂದು ಸ್ಮರಿಸಿದರು.

ಯೋಗ ಶಾಲೆಯ ಈಶ್ವರ, ಯೋಗ ಗುರು ಮನೋಹರ, ಬಾಬು ಮಾತನಾಡಿದರು.

ಎ.ವಿ.ಕೆ ಕಾಲೇಜು ಪ್ರಾಧ್ಯಾಪಕ ಡಾ. ಸೀ.ಚ. ಯತೀಶ್ವರ ಕಾರ್ಯಕ್ರಮ ನಿರೂಪಿಸಿದರು.

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA--573 116

Date : 06-06-2017

## ENVIRONMENT DAY CELEBRATION

### A BRIEF REPORT:

On 5th June 2017 we had celebrated National Environmental Day in the college campus by planting different verities of plants in the college campus. Mr. C.N. Ashok the environmentalist was the chief guest of the programme. Prof. K.S. Devaraju presided over the programme. Prof. E. Naganna, NSS Officer of our college was also present in the programme. Many of our students were also planted the plants like Neem, Teak & Honge etc. On that day the employees and the students were cleaned the campus to make grand success of swachh Bharath Andholon.

Principal
Sri Adichunchanagiri First Grade Collage
Channarayapatna-573 116



Principal
Sri Adichunchanagiri First Grade Collage
Channarayapatna-573 116

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Date: 11-09-2017

## AWARENESS PROGRAMME ON RALLY FOR RIVER

**A BRIEF REPORT:**

On the 9th September 2017 an awareness programme on the River protection was organized under the auspicious of an organization in the name of Esha Foundation (Gommata City Foundation) and our college. Nearly 120 students were participated in the rally programme. The rally started by 11.00 clock at Krishnarajendra Odeyar Circle in Channarayapatna town and ended at Srikantaiah Circle. The slogans of students regarding the river protection was very much appreciated by the public and also in the news papers. To support the protection rally the organization gave a number to the public 8000980009. Dr. K. Sanjay, the faculty member of History Department was participated in the rally. Mr. Prathap, Vice-President and Prabhakar, Secretary of Gommata City Foundation were also participated in the rally.

Principal
Sri Adichunchanagiri First Grade Collage
Channarayapatna-573 116




Principal
Sri Adichunchanagiri First Grade Collage
Channarayapatna-573 116

# ‘ರ್‍ಯಾಲಿ ಫಾರ್ ರಿವರ್’ ಬೆಂಬಲಿಸಿ ಜಾಥಾ

■ **ವಿಕ ಸುದ್ದಿಲೋಕ** ಚನ್ನರಾಯಪಟ್ಟಣ

ಜಗ್ಗಿ ವಾಸುದೇವ ಗುರೂಜಿ ನಡೆಸುತ್ತಿರುವ ರ್‍ಯಾಲಿ ಫಾರ್ ರಿವರ್ ಅಭಿಯಾನವನ್ನು ಬೆಂಬಲಿಸಿ ಪಟ್ಟಣದ ಗೊಮ್ಮಟ ಸಿಟಿ ಫೌಂಡೇಶನ್ ವತಿಯಿಂದ ಜಾಥಾ ನಡೆಸಲಾಯಿತು.

ಮಾಧ್ಯಮಿಕ ಶಾಲಾ ಆವರಣದಿಂದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಫಲಕಗಳನ್ನು ಹಿಡಿದು ನೀರನ್ನು ಉಳಿಸುವ ಘೋಷಣೆಗಳನ್ನು ಕೂಗುತ್ತಾ ಸಾಗಿದರು.

ಫೌಂಡೇಶನ್ ಅಧ್ಯಕ್ಷ ಚೇತನ್ ಮಾತನಾಡಿ, ನೀರಿನ ಮೂಲ ನದಿಗಳಾಗಿದ್ದು ಅವುಗಳ ಉಳಿವಿಗಾಗಿ ಎಲ್ಲ ಪ್ರಯತ್ನ ಪ್ರಾಮಾಣಿಕವಾಗಿರಬೇಕು. ನದಿ ಪಾತ್ರಗಳಲ್ಲಿ ಹಣ್ಣಿನ ಮರಗಳನ್ನು ಬೆಳೆಸುವ ಮೂಲಕ ಈ ಕಾರ್ಯವನ್ನು ಪರಿಪೂರ್ಣಗೊಳಿಸಬೇಕು. ಖಾಸಗಿ ಜಾಗಗಳಲ್ಲಿಯೂ ಹೆಚ್ಚಾಗಿ ಗಿಡಗಳನ್ನು ನೆಟ್ಟು ಬೆಳೆಸಬೇಕು. ಈ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ತಿಳಿವಳಿಕೆ ನೀಡಲಾಗುವುದೆಂದರು. ಈ ಆಂದೋಲನವನ್ನು ಬೆಂಬಲಿಸುವವರು 8000980009 ಸಂಖ್ಯೆಗೆ ಫೋನ್ ಕರೆ ಮಾಡಿದರೆ ಅಭಿಯಾನವನ್ನು ಬೆಂಬಲಿಸಿದಂತೆ ಎಂದರು.

ಶಾಲಾ ಹಂತಗಳಲ್ಲೂ ಈ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಮೂಡಿಸಬೇಕೆಂದರು. ಯೋಗೇಶ್, ಸಂಜಯ್ ಇದ್ದರು.




**ಚನ್ನರಾಯಪಟ್ಟಣ ಗೊಮ್ಮಟ ಸಿಟಿ ಫೌಂಡೇಶನ್ ವತಿಯಿಂದ ‘ರ್‍ಯಾಲಿ ಫಾರ್ ರಿವರ್’ ಅಭಿಯಾನಕ್ಕೆ ಬೆಂಬಲ ಸೂಚಿಸಲಾಯಿತು.**

---

**ಬೇಲೂರು:** ಭಾರತೀಯ ಜೀವ ವಿಮಾ ನಿಗಮವು ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದ್ದು, ಕಂಪನಿ ಗ್ರಾಹಕರಿಗೆ ಕ್ಲೈಮ್ ನೀಡುವಲ್ಲಿ ಶೇ.100 ರಷ್ಟು ಸಾಧನೆ ಮಾಡಿದೆ ಎಂದು ಶಾಖಾ ವ್ಯವಸ್ಥಾಪಕ ಜವರಯ್ಯ ತಿಳಿಸಿದರು. ಪಟ್ಟಣದ ಶಾಖಾ ಕಚೇರಿಯಲ್ಲಿ ಆಯೋಜಿಸಿದ್ದ ಕಂಪನಿಯ 61ನೇ ವರ್ಷದ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಹಾಯಕ ಆಡಳಿತಾಧಿಕಾರಿ ನವಾಜ್ ಜಾನ್, ಅಭಿವೃದ್ಧಿ ಅಧಿಕಾರಿಗಳಾದ ಶ್ರೀಧರ್, ಶ್ರೀಕಾಂತ್ ಇದ್ದರು.

**61ನೇ ವರ್ಷದ ಸಂಭ್ರಮ**

ಟಾಪ್ ನ್ಯೂಸ್

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » MYSURU

# ನದಿಗಳನ್ನು ರಕ್ಷಿಸಿ ಅಭಿಯಾನಕ್ಕೆ ಬೆಂಬಲ

## ಚನ್ನರಾಯಪಟ್ಟಣದಲ್ಲಿ ಜಾಥಾಕ್ಕೆ ಉಪನ್ಯಾಸಕ ಡಾ.ಸಂಜಯ್ ಚಾಲನೆ

■ ವಿಜಯವಾಣಿ ಸುದ್ದಿಜಾಲ ಚನ್ನರಾಯಪಟ್ಟಣ

ಇಶಾ ಫೌಂಡೇಷನ್ ಮುಖ್ಯಸ್ಥ ಜಗ್ಗಿ ವಾಸುದೇವ ಅವರು ನಡೆಸುತ್ತಿರುವ ನದಿಗಳನ್ನು ರಕ್ಷಿಸಿ ಅಭಿಯಾನಕ್ಕೆ ಗೊಮ್ಮಟ ಸಿಟಿ ಫೌಂಡೇಶನ್ ಹಾಗೂ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಜಾಥಾ ನಡೆಸಿ ಬೆಂಬಲ ವ್ಯಕ್ತಪಡಿಸಿದರು.

ಕೃಷ್ಣರಾಜೇಂದ್ರ ಒಡೆಯರ್ ವೃತ್ತದ ಮೂಲಕ ವಿದ್ಯಾರ್ಥಿಗಳು ನವೋದಯ ವೃತ್ತ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಲ್ದಾಣ, ಮೈಸೂರು ರಸ್ತೆ, ಆಸ್ಪತ್ರೆ ರಸ್ತೆ ಹಾಗೂ ಶ್ರೀಕಂಠಯ್ಯ ವೃತ್ತ ಸೇರಿದಂತೆ ಇತರ ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಿದರು. ದೇಶದಲ್ಲಿ ವೈಜ್ಞಾನಿಕ ಜಲನೀತಿ ಇಲ್ಲದೆ ಇರುವುದರಿಂದ ನದಿಗಳು ಹಾಳಾಗುತ್ತಿವೆ. ಇವುಗಳನ್ನು ಉಳಿಸುವುದು ಪ್ರತಿ ಯೊಬ್ಬರ ಕರ್ತವ್ಯ, ಇತ್ತೀಚಿನ ದಿನದಲ್ಲಿ ನೀರಿನ ಸಮಸ್ಯೆ ಎದುರಾಗಿರುವುದು ನದಿಗಳ ಒತ್ತುವರಿ ಹಾಗೂ ಪರಿಸರ ಮಾಲಿನ್ಯದಿಂದ, ನದಿಗಳ ಇಕ್ಕೆಲಗಳಲ್ಲಿ ಮರ ಬೆಳೆಸಲು ಸರ್ಕಾರ ಮುಂದಾಗಬೇಕೆಂದು ಆಗ್ರಹಿಸಿದರು.

ಕೃಷಿ ಪ್ರಧಾನ ದೇಶದಲ್ಲಿ ಜಲನೀತಿ, ಕೆರೆ, ಕಟ್ಟೆ ಹಾಗೂ ನದಿಗಳ ಅಭಿವೃದ್ಧಿ ಮಾಡುತ್ತಿಲ್ಲ, ರಾಜ್ಯ ಸರ್ಕಾರ ನೀರಿಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು, ನೀರಿನ ವಿಷಯದಲ್ಲಿ ಸಾರ್ವಜನಿಕರು ಒಟ್ಟಾಗಿ ಹೋರಾಡುವ ಮೂಲಕ ಜಲನೀತಿ ರೂಪಿಸುವಂತೆ ಕೇಂದ್ರಕ್ಕೆ ಮನವಿ ಮಾಡಬೇಕೆಂದರು.

ಇಶಾ ಫೌಂಡೇಶನ್ ನದಿಗಳನ್ನು ರಕ್ಷಿಸಿ ಆಂದೋಲವನ್ನು ರಾಷ್ಟ್ರವ್ಯಾಪಿ ಮಾಡುತ್ತಿದ್ದು ಈ ಆಂದೋಲಕ್ಕೆ ಬೆಂಬಲ ವ್ಯಕ್ತಪಡಿಸುವ ಜನತೆ 80009 80009 ದೂರವಾಣಿ ಸಂಖ್ಯೆಗೆ ಮಿಸ್ಡ್‌ಕಾಲ್ ನೀಡಬೇಕೆಂದು ಮನವಿ ಮಾಡಿದರು.

ಪ್ರಥಮದರ್ಜೆ ಕಾಲೇಜು ಉಪನ್ಯಾಸಕ ಡಾ.ಸಂಜಯ್ ಜಾಥಾಕ್ಕೆ ಚಾಲನೆ ನೀಡಿದರು.

ಗೊಮ್ಮಟ ಸಿಟಿ ಫೌಂಡೇಶನ್ ಉಪಾಧ್ಯಕ್ಷ ಪ್ರತಾಪ್, ಕಾರ್ಯದರ್ಶಿ ಪ್ರಭಾಕರ್, ಮನು, ರಾಘು, ವಕೀಲ ಯೋಗೇಂದ್ರ ಇತರರಿದ್ದರು.




ವಿಜಯವಾಣಿ ಚಿತ್ರ

**ಚನ್ನರಾಯಪಟ್ಟಣದಲ್ಲಿ ವಿದ್ಯಾರ್ಥಿಗಳು ನದಿಗಳನ್ನು ರಕ್ಷಿಸಿ ಅಭಿಯಾನ ಜಾಥಾ ನಡೆಸಿದರು.**

Principal
Sri Adichunchanagiri First Grade Collage
Channarayapatna-573 116

| |JAI SRI GURUDEV| |

# SRI ADICHUNCHANAGIRI FIRST GRADE COLLEGE

CHANNARAYAPATNA-573 116

Date: 28-01-2017

## IQAC

## Special Guest Lecture Programme

### A Brief Report:

A Special Guest Lecture Programme on **National Voters Day** on 28th Jan. 2017 was organized by the Department of Political Science at HCS Hall. The programme was commenced with an invocation by Kum. Shwetha.

Prof. B.S. Ramakrishne Gowda, HOD of Political Science welcomed the chief guest and the gatherings. Dr. S.D. Yogeraj, retired Professor of Sri Adichunchanagiri First Grade college, Nagamangala was the main speaker he spoke about the importance of voting and the interaction programme was also held.


Dr. S.B. Shivakumar, HOD of Sociology, Prof. K. Chandran, Co-ordinator, IQAC, Mr. Siddaraju, lecturer and Mr. D.P. Padmaraju, Lecturer were present in the dais. The programme was concluded with the vote of thanks by Mr. D.P. Padmaraju.

Principal
Sri Adichunchanagiri First Grade Collage
Channarayapatna-573 116

ವಿಜಯ ಕರ್ನಾಟಕ, 28/1/2017

## ರಾಷ್ಟ್ರೀಯ ಮತದಾರರ ದಿನಾಚರಣೆ

# ಪ್ರಾಮಾಣಿಕರಿಗೆ ಮತ ಹಾಕಿ ಪ್ರಜಾಪ್ರಭುತ್ವ ಉಳಿಸಿ



ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಡಾ.ಎಸ್.ಡಿ. ಯೋಗರಾಜು ಮಾತನಾಡಿದರು.

■ **ವಿಕ ಸುದ್ದಿಲೋಕ** ಚನ್ನರಾಯಪಟ್ಟಣ

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಚುನಾವಣೆಗಳು ನಡೆಯುತ್ತಿವೆ ಎಂದು ನಾಗಮಂಗಲ ಎಸ್ಎಸಿ ಕಾಲೇಜು ನಿವೃತ್ತ ಸಹ ಪ್ರಾಧ್ಯಾಪಕ ಡಾ.ಎಸ್.ಡಿ.ಯೋಗರಾಜು ತಿಳಿಸಿದರು.

ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದಿಂದ ಎಚ್‌ಸಿಎಸ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿ, ಅನಗತ್ಯ ಚುನಾವಣೆಗಳಿಂದ ಪ್ರಜಾಪ್ರಭುತ್ವ ನಲುಗುತ್ತಿದೆ ಎಂದರು.

''ಭಾರತದ ಸಂವಿಧಾನ ಎಲ್ಲಾ ರಾಷ್ಟ್ರಗಳಿಗೆ ಮಾದರಿಯಾಗಿದ್ದರೂ ಚುನಾವಣಾ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ಕಾಣಬೇಕಾಗಿದೆ. ಬದ್ಧತೆಯ ವ್ಯಕ್ತಿಗಳು ಅಧಿಕಾರದ ಸ್ಥಾನದಲ್ಲಿದ್ದರೆ ಮಾತ್ರ ಇದು ಸಾಧ್ಯ. ಅಡ್ಡಮತದಾನ, ಅಕ್ರಮ ಮತದಾನಗಳು ನಡೆಯಬಾರದು. ಕಾನೂನಿನ ಅಡಿಯಲ್ಲಿ ರಕ್ಷಣಾತ್ಮಕ ನ್ಯಾಯದ ಪ್ರತಿಪಾದನೆ ನಡೆಯುತ್ತಿದೆ. ಮಹಿಳಾ ಮೀಸಲು ಎಷ್ಟರಮಟ್ಟಿಗೆ ಜಾರಿಯಾಗಿದೆ ಎಂಬುದು ಪ್ರಶ್ನೆಯಾಗಿಯೇ ಕಾಡುತ್ತಿದೆ ಎಂದರು.

ಪ್ರಭಾರ ಪ್ರಾಂಶುಪಾಲ ಡಾ.ಎಸ್.ಬಿ.ಶಿವಕುಮಾರ್ ಮಾತನಾಡಿ, ನಾವು ಪ್ರಾಮಾಣಿಕರಾದಾಗ ಮಾತ್ರ ಪ್ರಾಮಾಣಿಕರ ಆಯ್ಕೆ ಆಗುತ್ತದೆ. ಚುನಾವಣೆಯ ಆಳ, ಅಗಲಗಳನ್ನು ತೋರಿಸಿಕೊಟ್ಟವರು ಟಿ.ಎನ್. ಶೇಷನ್. ಇಂತಹ ವಿಚಾರಗಳ ಬಗ್ಗೆ ರಾಜ್ಯಮಟ್ಟದ ವಿಚಾರ ಸಂಕಿರಣಗಳು ಆಗಬೇಕು. ವಿಚಾರಮಂಥನದ ಮೂಲಕ ಹೊಸಹೊಸ ಚಿಂತನೆಗಳು ಮೂಡಬೇಕು. ಜಾತಿ, ಧರ್ಮದ ಆಧಾರದ ಮೇಲೆ ಚುನಾವಣೆ ನಡೆಯುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಪೆಟ್ಟುನೀಡಿದೆ ಎಂದರು.

ವಿದ್ಯಾರ್ಥಿಗಳಾದ ಸ್ವಾತಿ, ರುಹಾನ ಹಾಗೂ ಇತರರು ತಮ್ಮಲ್ಲಿದ್ದ ಅನುಮಾನಗಳಿಗೆ ಅತಿಥಿಗಳಿಂದ ಪರಿಹಾರ ಕಂಡುಕೊಂಡರು. ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ಪ್ರೊ.ಕೆ.ಚಂದ್ರನ್, ಪ್ರೊ.ಬಿ.ಎಸ್.ರಾಮಕೃಷ್ಣೇಗೌಡ, ಸಿದ್ದರಾಜು, ಡಿ.ಪಿ.ಪದ್ಮರಾಜು ಇದ್ದರು.

### ಕಾಟಾಚಾರಕ್ಕೆ ದಿನಾಚರಣೆ

ಚುನಾವಣಾ ಆಯೋಗದ ನಿರ್ದೇಶನದ ಹಿನ್ನೆಲೆಯಲ್ಲಿ ತಾಲೂಕು ಆಡಳಿತದಿಂದ ಮಿನಿವಿಧಾನಸೌಧದ ಆವರಣದಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾಟಾಚಾರಕ್ಕೆ ಮಾಡಿದಂತಿತ್ತು. ನಿಗದಿತ ಸಮಯಕ್ಕಿಂತ ತಡವಾಗಿ ಆರಂಭವಾಯಿತಾದರೂ ಪ್ರೌಢಶಾಲೆಯ ಹೆಣ್ಣುಮಕ್ಕಳನ್ನು ಕಾರ್ಯಕ್ರಮಕ್ಕೆ ಕರೆತಂದು ಅವರಿಂದ ಕಡ್ಡಾಯವಾಗಿ ಮತದಾನ ಮಾಡುತ್ತೇನೆಂದು ಪ್ರಮಾಣವಚನ ಹೇಳಿಸಿದ್ದು ಅಪಹಾಸ್ಯವೆನಿಸಿತು.

ಸಾಂಪ್ರದಾಯಿಕ ಸ್ವಾಗತ, ವಂದನೆ ನಡುವೆ ತಹಸೀಲ್ದಾರ್ ಡಿ.ವಿದ್ಯಾವತಿ ಪ್ರಮಾಣವಚನ ಬೋಧಿಸಿದ್ದೇ ಕಾರ್ಯಕ್ರಮದ ಪ್ರಮುಖ ಘಟ್ಟವಾಯಿತು. ಪ್ರಜಾಪ್ರಭುತ್ವದ ಮಹತ್ವ ಕುರಿತಂತೆ ಯಾರೊಬ್ಬರೂ ನಾಲ್ಕು ಸಾಲೂ ಮಾತನಾಡದೆ ಕಾರ್ಯಕ್ರಮ ಮುಗಿಸಲಾಯಿತು. ತಾಲೂಕು ಪಂಚಾಯಿತಿ ಇಒ ಎನ್.ದತ್ತೇಶ್ವರ, ಖಜಾನೆ ಅಧಿಕಾರಿ ಓಂಕಾರಪ್ಪ, ದೈಹಿಕ ಶಿಕ್ಷಣ ಅಧೀಕ್ಷಕ ಅಣ್ಣೇಗೌಡ, ಚುನಾವಣಾಶಾಖೆಯ ಮುಖ್ಯಸ್ಥ ಅನಂತಪದ್ಮನಾಭ ಉಡುಪ ಇದ್ದರು.

---

# ...ದ್ದರೆ ಹೋರಾಟ

...ಆಲೋಚಿಸಬೇಕು,'' ಎಂದರು.

**ರಾಜ್ಯಾದ್ಯಂತ ಹೋರಾಟ:** ''ಇದಲ್ಲದೆ ಒಂದು ವರ್ಷದ ಅವಧಿಯಲ್ಲಿ ಕೋಟ್ಯಂತರ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಮುದ್ರಿಸಲು ಸಾಧ್ಯವೆ ಎಂಬುದನ್ನು ಮನಗಾಣಬೇಕಿದೆ. ಇಷ್ಟೆಲ್ಲಾ ಬೆಳವಣಿಗಳ ಬಗ್ಗೆ ತಿಳಿದಿದ್ದರೂ ಶಿಕ್ಷಣ ಸಚಿವ ತನ್ವೀರ್ ಸೇಠ್ ಈ ಕ್ರಮವನ್ನು ವಿರೋಧಿಸದಿರಲು ಕಾರಣವೇನು ಎಂಬುದನ್ನು ತಿಳಿಸಬೇಕು. ಮಾತ್ರವಲ್ಲದೆ ಪಠ್ಯ ಬದಲಾವಣೆ ಬಗ್ಗೆ ತಮ್ಮ ನಿಲುವೇನು ಎಂಬುದನ್ನು ಬಹಿರಂಗಪಡಿಸಬೇಕು. ಸರಕಾರ ಈ ನಿರ್ಧಾರವನ್ನು ಕೈಬಿಡಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಬೃಹತ್ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಸಿದರು.

''ಪಠ್ಯ ಬದಲಾವಣೆಯ ಕರಡು ಪ್ರತಿ ನೀಡುವಂತೆ ಕೇಳಿದರೆ ಕೇವಲ 138 ಸಿಡಿಗಳನ್ನು ನೀಡಿದ್ದಾರೆ. ಅದನ್ನು ಪುಸ್ತಕದ ರೂಪದಲ್ಲಿ ಹೊರತಂದು ಸೂಕ್ತ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿಲ್ಲ. ತನ್ಮೂಲಕ 1.6 ಕೋಟಿ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುತ್ತಿದ್ದಾರೆ. ಇದಲ್ಲದೆ ಪಠ್ಯ ಪುಸ್ತಕ ರಚನೆ ವೇಳೆ ಭರತ, ಮಾತೃಭೂಮಿ ಎಂಬುದು ಸೇರಿದಂತೆ ಕೆಲವೊಂದು ಪದಗಳನ್ನು ಕೈಬಿಡಲಾಗಿದೆ. ಇದಲ್ಲದೆ ಇತಿಹಾಸದ ಮಹಾ ಪುರುಷರ ಹೆಸರು ಹಾಗೂ ಅವರ ವಿಚಾರಗಳನ್ನು ತೆಗೆದು ಹಾಕಿರುವುದು ಸರಿಯಲ್ಲ,'' ಎಂ...

---

# ...ೂರು ಅಣಿ

...ರ್ ಸಿನಿಮಾ ಸ್ಪರ್ಧೆ

| | ದೇಶ |
|---|---|
| | ಶ್ರೀಲಂಕಾ |
| | ಕಿರ್ಜಿಸ್ತಾನ್ |
| ...ಬೊಂಗ | ಥೈಲ್ಯಾಂಡ್ |
| | ಚೀನಾ |
| ...ೀಸ್ ಪೊಯಮ್ | ಚೀನಾ |
| ...ಾರ್ ಕಿಯಾಬಾನ್ ...ಚಿಕೊಮ್ | ಇರಾನ್ |
| ...್ ದಿ ಲಿಟಲ್ | ಇಸ್ರೇಲ್ |
| ...ಪ್ರಾಗ್ | ಇಂಡೋನೇಷಿಯಾ |
| ...ರ್ | ತೈವಾನ್ |
| ...ಫ್ಲೈಡ್ರೀಮ್ | ಶ್ರೀಲಂಕಾ |
| ...ತು ...ರ್ | ಫಿಲಿಪ್ಪೈನ್ಸ್ |
| ...್ | ಮಂಗೋಲಿಯಾ |
| ...ರಾನ್ ಪಾಕಿ | ರಾಜಭಂಕ್ಷಿ |

...ಕ್ಲ್ಯಾಶ್, ರಷ್ಯನ್ ಭಾಷೆಯ ದಿ ಸ್ಟೂಡೆಂಟ್, ಮೆಕ್ಸಿಕೊ ...ೇರ್ಸ್ ಹೌಸ್ ಹಾಗೂ ದಿ ಡಿಸ್ಟಿಂಗ್‌ವಿಶ್ ಸಿಟಿಜನ್ ಎಂಬ ... ಪ್ರದರ್ಶನಗೊಳ್ಳಲಿವೆ ಎಂದು ಮೈಸೂರು ವಿಭಾಗ ...ತ್ಸವ ಸಂಯೋಜಕ ಮನು 'ವಿಜಯಕರ್ನಾಟಕ'ಕ್ಕೆ

**...ಗೆ ವ್ಯವಸ್ಥೆ**

...ೀಕ್ಷಣೆಗೆ ಶುಲ್ಕ ಪಾವತಿಸಿ ಪಾಸ್ ಪಡೆಯುವವರಿಗೆ ...ಶ್ ಮೈಸೂರ್‌ನಲ್ಲಿ ರಿಯಾಯಿತಿ ದರದಲ್ಲಿ ಪಾರ್ಕಿಂಗ್ ...ರೆಯಲಿದೆ. ಸಾಮಾನ್ಯವಾಗಿ ಇಲ್ಲಿ ಗಂಟೆ ಲೆಕ್ಕಾಚಾರದಲ್ಲಿ ...ದಾಜು 200 ರೂ. ಪಾವತಿಸಬೇಕು. ಜಿಲ್ಲಾಡಳಿತ ...ೋತ್ಸವದ ಅಂಗವಾಗಿ ಚಿತ್ರ ವೀಕ್ಷಣೆಗೆ ಬರುವವರಿಗೆ 30 ...ದಿನಪೂರ್ತಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಿದೆ.

Principal
Sri Adichunchanagiri First Grade Collage
Channarayapatna-573 116

||JAI SRI GURUDEV||

# SRI ADICHUNCHANAGIRI FIRST GRADE COLLEGE

CHANNARAYAPATNA-573 116

Date : 01-02-2017

## Report on Leprosy Day Celebration

### A Brief Report:

On 31st January 2017, in association with Sri Adichunchanagiri Medical Sciences, BG Nagar and Shalini Institute Channarayapatna, we have celebrated National Leprosy Day & Martyrs' Day at Govt. Hospital, Channarayapatna. On that day a free health camp was conducted. Mr. C.N. Balakrishna, MLA of Shravanabelagola constituency participated in the camp and spoke about Mahathma Gandhiji. Many students of our college were participated in the jatha programme conducted by them.

Poojya Sri Sri Shambhunatha Swamiji, Secretary, Sri Adichunchananagiri Mahasamsthana Math, Hassan and Sri Shivaputhra Swamiji of Kabali Math blessed the gatherings.

Dr. D. Venkatesh, District Chief Medical Officer was also spoke about the leprosy. Mr. C.N. Ashok Environmentalist, Dr. T.M. Manohar, Dr. B.D. Sathyanarayan, Taluk Health Officer were also in the programme.

Principal
Sri Adichunchanagiri First Grade Collage
Channarayapatna-573 116

# ಆರೋಗ್ಯದ ಕಾಳಜಿ ಅಗತ್ಯ: ಸ್ವಾಮೀಜಿ

31/1/17

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ: ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಆದಿಚುಂಚನಗಿರಿ ಶಾಖಾ ಮಠಾಧೀಶ ಶಂಭುನಾಥ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ, ಸಂಶೋಧನಾ ಕೇಂದ್ರ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಸಹಯೋಗದಲ್ಲಿ ಸೋಮವಾರ ರಾಷ್ಟ್ರೀಯ ಕುಷ್ಠರೋಗ ಮಾಸಾಚರಣೆ, ಹುತಾತ್ಮ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಏರ್ಪಡಿಸಿದ್ದ ಕುಷ್ಠರೋಗ ನಿರ್ಮೂಲನಾ ದಿನಾಚರಣೆಯಲ್ಲಿ ಅವರು ಆಶೀರ್ವಚನ ನೀಡಿದರು.

ಕುಷ್ಠರೋಗ ನಿವಾರಿಸಲು ಸೂಕ್ತ ಚಿಕಿತ್ಸೆ ಪಡೆಯಬೇಕು. ರೋಗಿಗಳನ್ನು ಗೌರವದಿಂದ ಕಾಣಬೇಕು. ದೀನ, ದಲಿತರ ಸೇವೆ ಮಾಡಲು ಆದ್ಯತೆ ನೀಡಬೇಕು. ಆದಿಚುಂಚನಗಿರಿ ಮಠದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ. ಇದರ ಪ್ರಯೋಜನವನ್ನು ಎಲ್ಲರು ಪಡೆದು ಕೊಳ್ಳಬೇಕು ಎಂದು ಹೇಳಿದರು.



ಚನ್ನರಾಯಪಟ್ಟಣದಲ್ಲಿ ಸೋಮವಾರ ಏರ್ಪಡಿಸಿದ್ದ ಕುಷ್ಠರೋಗ ನಿರ್ಮೂಲನಾ ದಿನಾಚರಣೆಯಂದು ಆದಿಚುಂಚನಗಿರಿ ಶಾಖಾ ಮಠಾಧೀಶ ಶಂಭುನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಸಿ.ಎನ್.ಬಾಲಕೃಷ್ಣ ಇದ್ದಾರೆ

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಗ್ರಾಮದ ಏಳಿಗೆಗೆ ಮಹಾತ್ಮಗಾಂಧೀಜಿ ಹೆಚ್ಚು ಒತ್ತು ನೀಡಿದ್ದರು. ಗ್ರಾಮಗಳು ಅಭಿವೃದ್ಧಿ ಹೊಂದಿದರೆ ದೇಶ ಪ್ರಗತಿಪಥದತ್ತ ಸಾಗುತ್ತದೆ ಎಂಬ ಆಶಯ ಹೊಂದಿದ್ದರು ಎಂದರು.

ಹೋಬಳಿ ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದ ಮೂಲಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದರು.

ಕಬ್ಬಳಿಯ ಶಿವಪುತ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ತಹಶೀಲ್ದಾರ್ ಡಿ.ವಿದ್ಯಾವತಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಪರಿಸರವಾದಿ ಸಿ.ಎನ್.ಅಶೋಕ್, ಡಾ.ಟಿ.ಎಂ. ಮನೋಹರ್, ಡಾ.ಬಿ.ಡಿ. ಸತ್ಯ ನಾರಾಯಣ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎಚ್.ಎನ್.ಮಹದೇವಪ್ರಸಾದ್, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಶೀತಲ್ ಕುಮಾರ್ ಇದ್ದರು.

ಸಾರ್ವಜನಿಕ ಸಂಪರ್ಕಾಧಿಕಾರಿ ವೈ.ಪಿ.ಧರ್ಮೇಂದ್ರ ಸ್ವಾಗತಿಸಿದರು.

ಪಟ್ಟಣದ ಪ್ರಮುಖ ಬೀದಿಯಲ್ಲಿ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನ ಎನ್ಎಸ್ಎಸ್ ವಿದ್ಯಾರ್ಥಿಗಳು, ಆದಿಚುಂಚನಗಿರಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು, ಶಾಲಿನಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಜಾಗೃತಿ ಮೂಡಿಸುವ ಕುರಿತು ಮೆರವಣಿಗೆ ನಡೆಸಿದರು.

ಚಿತ್ರಾವಳಿ

31/1/17 ವಿಜಯ ಕರ್ನಾಟಕ

# ಸೇವಾ ಮನೋಭಾವವೇ ದಾರಿದೀಪ

ವಿಕ ಚಿತ್ರಲೋಕ

■ **ವಿಕ ಸುದ್ದಿಲೋಕ** ಚನ್ನರಾಯಪಟ್ಟಣ

ಸೇವಾ ಮನೋಭಾವ ಎಲ್ಲರ ಜೀವನದಲ್ಲಿ ದಾರಿ ದೀವಿಗೆಯಂತಾಗಲಿ ಎಂದು ಶಾಸಕ ಸಿ.ಎನ್ .ಬಾಲಕೃಷ್ಣ ಹೇಳಿದರು.

ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ, ಶಾಲಿನಿ ವಿದ್ಯಾಸಂಸ್ಥೆ ಹಾಗೂ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಆಸ್ಪತ್ರೆ ಆವರಣದಲ್ಲಿ ರಾಷ್ಟ್ರೀಯ ಹುತಾತ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕುಷ್ಟರೋಗ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಡಿ.ವೆಂಕಟೇಶ್ ಮಾತನಾಡಿ ಜಿಲ್ಲೆಯಲ್ಲಿ 8 ಕುಷ್ಟರೋಗ ಪ್ರಕರಣಗಳು ಪತ್ತೆಯಾಗಿದ್ದು ಅದಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಕುಷ್ಟರೋಗಕ್ಕೆ ಚಿಕಿತ್ಸೆ ಇಲ್ಲವೆಂಬ ಭಾವನೆ ದೂರಮಾಡಿ ಸಕಾಲದಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಗುಣಪಡಿಸಿಕೊಳ್ಳಬಹುದಾಗಿದೆ ಎಂದರು.

ಆದಿಚುಂಚನಗಿರಿ ಔಷಧೀಯ ಮಹಾವಿದ್ಯಾಲಯದ ಸೂಪರಿಂಟೆಂಡೆಂಟ್ ಡಾ. ಮನೋಹರ್, ಡಾ.ಬಿ.ಡಿ.ಸತ್ಯನಾರಾಯಣ, ತಾಲೂಕು ಆರೋಗ್ಯಾಧಿಕಾರಿ ಡಾ. ಮಹದೇವಪ್ರಸಾದ್, ತಹಸೀಲ್ದಾರ್ ಡಿ.ವಿದ್ಯಾವತಿ, ಡಾ. ಶೀತಲ್‌ಕುಮಾರ್, ಮಹೇಂದ್ರ ಇದ್ದರು. ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಗಮನ ಸೆಳೆದರು. ಸಮಾರಂಭದ ಆರಂಭಕ್ಕೂ ಮುನ್ನ ಹುತಾತ್ಮ ದಿನಾಚರಣೆ ಅಂಗವಾಗಿ 2 ನಿಮಿಷ ಮೌನಾಚರಣೆ ಮಾಡಿ ಮಹಾತ್ಮಗಾಂಧೀಜಿಯವರ ಆತ್ಮಕ್ಕೆ ಶಾಂತಿಕೋರಲಾಯಿತು.



ಚನ್ನರಾಯಪಟ್ಟಣದ ಸರಕಾರಿ ಆಸ್ಪತ್ರೆ ಆವರಣದಲ್ಲಿ ನಡೆದ ಹುತಾತ್ಮ ದಿನಾಚರಣೆಯಲ್ಲಿ ಮೌನಾಚರಣೆ ಮೂಲಕ ಗಾಂಧೀಜಿಯವರ ಆತ್ಮಕ್ಕೆ ಶಾಂತಿಕೋರಲಾಯಿತು.

Principal
Sri Adichunchanagiri First Grade Collage
Channarayapatna-573 116

18
9

||JAI SRI GURUDEV||

# SRI ADICHUNCHANAGIRI FIRST GRADE COLLEGE

CHANNARAYAPATNA-573 116

Sri Adi Chunchanagiri First Grade College 573 116. No. Dt. Channarayapatna

Date: 12-02-2016

## IQAC

## SPECIAL GUEST LECTURE

**A BRIEF REPORT:**

A Special Guest lecture was arranged on February 10th 2016 to commemorate the birth Anniversary of Lala Lajapath Roy at HCS conference hall. The speaker of the programme was T.N. Saraswathi, retired lecturer, Government PU College, Turuvekere.

Addressing the gathering Mrs. Saraswathi told that Sri Lala Lajapath Roy had rendered a yeoman service as an advocate, writer and journalist. He was also a well known educationist. He was the founder of Punjab National Bank and a great freedom fighter. He fought very bravely for the freedom of the country along with Balagangadhara Tilak, Bipin Chandrapal and Madanmohan Malaveeya. All the students were very much impressed by all the informations given by her.

The function was presided over by Prof. K.S. Devaraju, Principal. In his presidential address inform the students to inculcate all the qualities of these great people and to make them as their role model. Mr. K.M. Vijaykumar, Department of Economics also spoke on the occasion. Mr. Rajesh, Department of History and Ms. J.J. Rakshitha, Department of Economics were present on the occasion.

The guest lecture programme was concluded with the vote of thanks by Ms. Pallavi, III B.A. student.

ಪ್ರಜಾವಾಣಿ ಗುರುವಾರ • ಫೆಬ್ರುವರಿ 11, 2016

ನಿವೃತ್ತ ಉಪನ್ಯಾಸಕಿ ಟಿ.ಎನ್. ಸರಸ್ವತಿ ಹೇಳಿಕೆ

# ಲಾಲಾ ಲಜಪತ್‌ರಾಯ್ ಅಪ್ರತಿಮ ದೇಶಭಕ್ತ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ: ಲಾಲಾ ಲಜಪತ್ ರಾಯ್ ಅವರು ಅಪ್ರತಿಮ ದೇಶಭಕ್ತ ಎಂದು ತುರುವೇಕೆರೆ ಸರ್ಕಾರಿ ಪದವಿ ಪೂರ್ವಕಾಲೇಜು ನಿವೃತ್ತ ಉಪನ್ಯಾಸಕಿ ಟಿ.ಎನ್. ಸರಸ್ವತಿ ಹೇಳಿದರು.

ಬುಧವಾರ ಪಟ್ಟಣದ ಆದಿಚುಂಚನ ಗಿರಿ ಪ್ರಥಮದರ್ಜೆ ಕಾಲೇಜಿನಲ್ಲಿ ರಾಷ್ಟ್ರಗೌರವ ಸಂರಕ್ಷಣಾ ಪರಿಷತ್ತು ವತಿಯಿಂದ ಏರ್ಪಡಿಸಿದ್ದ ಲಾಲಾ ಲಜಪತ್‌ರಾಯ್ ಜನ್ಮದಿನಾಚರಣೆಯೆಂದು ಮಾತನಾಡಿದ ಅವರು, ವಕೀಲರಾಗಿ, ಲೇಖಕ, ಪತ್ರಕರ್ತ, ಶಿಕ್ಷಣ ತಜ್ಞ ಸೇರಿ ಅನೇಕ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರು. ಪಂಜಾಬ್ ನ್ಯಾಷನಲ್ ಬ್ಯಾಂಕ್ ಸ್ಥಾಪಿಸಿದ್ದರು. ಬಾಲಗಂಗಾಧರ ತಿಲಕ್, ಬಿಪಿನ್‌ಚಂದ್ರಪಾಲ್, ಮದನ ಮೋಹನಮಾಳವಿಯ ಸೇರಿ ಅನೇಕ ನಾಯಕರ ಜೊತೆಗೂಡಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡ ಮಾಡಿದ ಧೀಮಂತ ನಾಯಕ ಎಂದು ಬಣ್ಣಿಸಿದರು.

ಕಾಲೇಜು ಪ್ರಾಂಶುಪಾಲ ದೇವರಾಜು ಮಾತನಾಡಿ, ಅನೇಕ ಮಹಾನೀಯರುಗಳ ಆದರ್ಶ, ಅವರ ಸರಳತೆ ಇಂದಿನ ಯುವಕರಿಗೆ ಮಾದರಿಯಾಗಬೇಕು ಎಂದು ಹೇಳಿದರು. ಉಪನ್ಯಾಸಕ ಕೆ.ಎಂ. ವಿಜಯಕುಮಾರ್ ಮಾತನಾಡಿದರು. ಉಪನ್ಯಾಸಕರಾದ ಜೆ.ಜೆ. ರಕ್ಷಿತಾ, ರಾಜೇಶ್ ಇದ್ದರು.



ಚನ್ನರಾಯಪಟ್ಟಣ ತಾಲ್ಲೂಕು ಆದಿಚುಂಚನಗಿರಿ ಪ್ರಥಮ ದರ್ಜೆಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಲಾಲಾ ಲಜಪತ್‌ರಾಯ್ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

...ಸಾಹಿತ್ಯ ಪರಿಷತ್ತಿಗೆ ... ಕೆಚ್ಚಾಗಿದೆ. ಬೇರೆ ಎಲ್ಲೋ ಏನೋ ...ಧನೆ ಮಾಡಲು ಪರಿಷತ್ತನ್ನು ವೇದಿ...ಗಿಸುವ ನಿಟ್ಟಿನಲ್ಲಿ ಕಳೆದ ಕೆಲವು ...ರ್ಷಗಳಿಂದ ಪ್ರಯತ್ನಗಳು ...ಡೆಯುತ್ತಿವೆ. ಆ ಕಾರಣದಿಂದಲೇ ...ಸಾ.ಪ.ದೊಳಗೆ ಜಾತೀಯತೆ ಮತ್ತು ...ರಾಜಕೀಯ ನುಸುಳಿದೆ. ಇದನ್ನು ಕೊನೆಗಾಣಿಸಿ, ಇತರ ಎಲ್ಲ ಚಟುವಟಿಕೆಗಳ ಜೊತೆಯಲ್ಲಿ ಪರಿಷತ್ತಿನಲ್ಲಿ ಒಂದು ಸಾಹಿತ್ಯ ಮತ್ತು ವಿಚಾರವಂತಿಕೆಯ ವಾತಾವರಣ ಮೂಡಿಸುವುದು ನನ್ನ ಮೊದಲ ಆ... ಎಂದರು.

‘ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಆಕಾಂಕ್ಷೆ ನನಗೆ ಇರಲಿಲ್ಲ. ಆದರೆ ಈಚೆಗೆ ಕ.ಸಾ.ಪ.ದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನೋಡಿ ಸಮಾನ ಮನಸ್ಕರೆಲ್ಲರೂ ಸೇರಿ ಚಿಂತನೆ ನಡೆ... ಒಂದು ಬದಲಾವಣೆ ಅಗತ್ಯ ಎಂಬ ತೀರ್ಮಾನಕ್ಕೆ ಬಂದೆವು. ಅಂಥ ಎ... ಸಮಾನ ಮನಸ್ಕರು ಬೆಂಬಲ ಕೊಟ... ನನ್ನನ್ನು ಕಣಕ್ಕೆ ಇಳಿಸಿದ್ದಾರೆ. ಕನ್ನಡ ನಾಡು–ನುಡಿ ಹೋರಾಟಗಳ ಜತೆ... ಜಿಲ್ಲೆಯ ಪ್ರಜ್ಞಾವಂತರು ಹಾಗೂ ಹಿರಿಯರ ರಚನಾತ್ಮಕ ಕನಸುಗಳ... ಕಾರ್ಯರೂಪಕ್ಕೆ ತರುವುದು ನಮ್ಮ ಗುರಿ’ ಎಂದು ಪ್ರಸನ್ನ ಹೇಳಿದರು.

ಲೇಖಕಿ ಬಾನು ಮುಷ್ತಾಕ್ ಮಾತನಾಡಿ, ‘ಕ.ಸಾ.ಪ.ದಲ್ಲಿ ನುಸುಳಿರುವ ರಾಜಕೀಯ, ಜಾತೀಯತೆಯ ಬಗ್ಗೆ ಚರ್ಚೆ ನಡೆಸುತ್ತಲೇ, ಆ ಸೋಂಕನ್ನು ನಿವಾರಿಸುವ ದಿಕ್ಕಿನಲ್ಲೂ ಕ್ರಮ ಕೈಗೊಳ್ಳಬೇಕಾಗಿದೆ. ಹಲವು ವರ್ಷಗಳಿಂದ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಪ್ರ... ಕುಮಾರ್ ಇದಕ್ಕೆ ಸೂಕ್ತ ವ್ಯಕ್ತಿ ಎಂ...ಸುತ್ತದೆ ಅದಕ್ಕಾಗಿ ಅವರನ್ನು ಬೆಂಬ...ಸಲು ತೀರ್ಮಾನಿಸಿದ್ದೇವೆ’ ಎಂದರು.

ಹಾಡ್ಲಹಳ್ಳಿ ನಾಗರಾಜು, ಸತೀ... ಎಸ್. ಬೋರೇಗೌಡ, ಹಾಗೂ

...s (Mysore) Private Ltd. Printed at Newsline Printers, Plot Nos. 103 & 104, Yadavagiri Industrial Area, Mysuru-570 020 and published from The Printers (Mysore) Private Ltd. # 363, Sri Hari Complex, Sita Vilas ...0 024. E-mail: editorpv@prajavani.co.in. Phone: 0821-2420129, Circ/Advt:0821-2420532, Fax:0821-2420129. Also printed at Bengaluru, Hubballi-Dharwad, Mangaluru, Kalaburagi, Davanagere and Hosapete

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Date : 30-07-2016

## Protection Rally

## A Brief Report

The students of our college conducted Protection Rally against the interim the judgment of Madadayi water distribution to the State with the Taluk Raitha Sangha. As per the report of the media the interim judgment of the court nearly 8-10 districts of the State can't able to get even drinking water to the people. On that day the students and the members of the State Raitha Sangha conducted the rally from central bus stand to the Taluk Office and submitted the report to the Tahalsidar in this regard.

The convener of the protection rally Mr. Srikanta Dodderi briefly explained the Kalasha Banduri scheme and the Mahadayi water distribution to the State.



Principal
Sri Adichunchanagiri First Grade Collage
Channarayapatna-573 116

...giri First Grade College ... 573 116



# ಮಹದಾಯಿ ತೀರ್ಪು ಖಂಡಿಸಿ ಬಂದ್ ಯಶಸ್ವಿ



ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಕಳಸಾ ಬಂಡೂರಿ ಯೋಜನೆ ಕುರಿತು ಶ್ರೀಕಂಠ ಮಾತನಾಡಿದರು.

- ಪಟ್ಟಣದ ಅಂಗಡಿಗಳನ್ನು ಬಂದ್ ಮಾಡಿಸಿ ರಸ್ತೆಯಲ್ಲಿ ಟೈರ್‌ಗೆ ಬೆಂಕಿಹಾಕಿ ಪ್ರತಿಭಟನೆ
- ಕಾಲೇಜು ವಿದ್ಯಾರ್ಥಿಗಳು ಭಾಗಿ

• **ಕನ್ನಡಪ್ರಭ ವಾರ್ತೆ** ಚನ್ನರಾಯಪಟ್ಟಣ

ಮಹದಾಯಿ ನೀರು ಹಂಚಿಕೆಯ ಮಧ್ಯಂತರ ತೀರ್ಪು ವಿರೋಧಿಸಿ ರಾಜ್ಯ ರೈತ ಸಂಘ ಕರೆ ನೀಡಿದ್ದ ಪಟ್ಟಣ ಬಂದ್ ಗುರುವಾರ ಯಶಸ್ವಿಯಾಗಿದೆ.

ನ್ಯಾಯಾಲಯ ನೀಡಿರುವ ಮಧ್ಯಂತರ ತೀರ್ಪಿನಿಂದ ರಾಜ್ಯದ ಐದು ಜಿಲ್ಲೆಗಳ ಜನತೆಗೆ ಕುಡಿಯುವ ನೀರಿಗೆ ಅನ್ಯಾಯ ವಾಗಿರುವುದನ್ನು ಖಂಡಿಸಿ ಬೆಳಗ್ಗೆ 8ರಿಂದಲೇ ರಾಜ್ಯ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಅಂಗಡಿಗಳನ್ನು ಬಂದ್ ಮಾಡಿಸಿ ರಸ್ತೆಯಲ್ಲಿ ಟೈರ್‌ಗೆ ಬೆಂಕಿ ಹಾಕಿದರಲ್ಲದೆ ಮೈಸೂರು ಶ್ರವಣಬೆಳಗೊಳ ರೈಲು ತಡೆ ಮಾಡಿ ಕೇಂದ್ರ, ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಳೆದ ಮೂರು ದಿನಗಳಿಂದ ರಾಜ್ಯ ಸಾರಿಗೆ ಬಸ್ ಸಂಚಾರದಿಂದ ಶಾಲಾ ಕಾಲೇಜುಗಳು ರಜೆ ಘೋಷಣೆ ಮಾಡಿ ಗುರುವಾರ ವಿದ್ಯಾರ್ಥಿಗಳು ಕಾಲೇಜಿಗೆ ಆಗಮಿಸಿದ ತಕ್ಷಣವೇ ರೈತ ಸಂಘದ ಕಾರ್ಯಕರ್ತರು ಕಾಲೇಜು ಆವರಣದೊಳಗೆ ನುಗ್ಗಿ ಕಾಲೇಜನ್ನು ಬಂದ್ ಮಾಡಿಸಿದರು.

ಪಟ್ಟಣದಲ್ಲಿ ಸಂಜೆ ನಾಲ್ಕರವರಗೆ ಯಾವುದೇ ವಾಣಿಜ್ಯ ವಹಿವಾಟು ನಡೆಸಲು ಬಿಡದ ರೈತ ಸಂಘದ ಕಾರ್ಯಕರ್ತರು ಕೇಂದ್ರ, ಸರ್ಕಾರಿ ಕಚೇರಿಗಳನ್ನು ಬಂದ್ ಮಾಡಿಸಿ ವ್ಯವಹಾರ ಸ್ಥಗಿತಗೊಳಿಸಿದ್ದರು.

ಬಂದ್ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಕಳಸಾ ಬಂಡೂರಿ ಯೋಜನೆ ಕುರಿತು ರೈತ ಸಂಘದ ಜಿಲ್ಲಾ ಸಂಚಾಲಕ ದೊಡ್ಡೇರಿ ಶೀಕಂಠ ಮಾತನಾಡಿ ಕೇಂದ್ರದ ನೀರು ಹಂಚಿಕೆಯ ಒಪ್ಪಂದದಂತೆ ಮಹದಾಯಿ ಯೋಜನೆಯಿಂದ ರಾಜ್ಯಕ್ಕೆ 7.5ಟಿಎಂಸಿ ನೀರು ಬಳಸಿಕೊಳ್ಳಲು ತಮಗೆ ಹಕ್ಕಿದೆ ಆದರೆ ಗೋವಾ ಸರ್ಕಾರ ಈ ನಿಟ್ಟಿನಲ್ಲಿ ಕಿತಾಪತಿ ತೆಗೆದಿದೆ ಎಂದು ತಿಳಿಸಿದರು.

ಸಮಸ್ಯೆಯನ್ನು ಬಗೆ ಹರಿಸುವಂತೆ ಕಳೆದ ಒಂದು ವರ್ಷದಿಂದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮನವಿ ಮಾಡುತ್ತಾ ಬಂದಿದ್ದರೂ ರಾಜ್ಯದ ಹಿತ ಕಾಪಾಡುವತ್ತಾ ಮನಸ್ಸು ಹರಿಸಿಲ್ಲ ಎಂದು ಆರೋಪಿಸಿದ ಅವರು ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು ಸಾಮೂಹಿಕವಾಗಿ ರಾಜಿನಾಮೆ ನೀಡಿ ಪ್ರತಿಭಟಿಸಲಿ ಎಂದು ಆಗ್ರಹಿಸಿದರು.